Rega No BG 155 — ಶ್ರೀ — 28—3—1962

Sri "SATYAVADI"
— DAILY —
MYSORE4
46 th Year

ಸತ್ಯವಾದಿ
SATYAVADI

ಪ ಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

Protect the cow — ಸ್ಥಾಪಕರು— ಅರಮನೆ ಸಿಂಸ್ಥೇದಾರ್ ಎಂ. ವಿ. ಸುಬ್ಬರಾಯರು [ಬಿಡಿ ಪ್ರತಿ 3 ಪೈ — ಗೋ ಸಂರಕ್ಷಣೆ ಮಾಡಿ

ಕಂಠಿಯವರ ಬೆಂಬಲಿಗರ ಧೋರಣೆಯಲ್ಲಿ ಬದಲಾವಣೆ ಇಲ್ಲ

ಮಂತ್ರಿಮಂಡಲ ಬಗ್ಗೆ ಹೈಕಮಾಂಡು ಪ್ರತಿನಿಧಿ ಬರುವ ಸಂದರ್ಭದಲ್ಲಿ ಕಂಠಿಯವರ ಬೆಂಬಲಿಗರಲ್ಲಿ ಯಾವ ಬದಲಾವಣೆ ಧೋರಣೆಯೂ ಕಂಡಿಲ್ಲವೆಂದು ಬೆಂಗಳೂರು ವಾರ್ತೆ ದೆಹಲಿಯಿಂದ ಬೆಂಗಳೂರಿಗೆ ನಿನ್ನೆ ಬಂದ ಮುಖ್ಯ ಮಂತ್ರಿ ಶ್ರೀ ಎಸ್ ಆರ್ ಕಂಠಿಯವರು ಪತ್ರಿಕೆಯವರೊಡನೆ ಮಾತಾಡುತ್ತಾ, ವಿಶಾಲ ತಳಹದಿ ಮಂತ್ರಿ ಮಂಡಲ ರಚನೆಗೆ ನೆರವನ್ನು ನೀಡಲು 2-3 ದಿನಗಳಲ್ಲಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ಸಂಜೀವರೆಡ್ಡಿಯವರು ಬರುವರು ಎಂದರು

ಪಾರ್ಸೆಟ್ ಸ್ಮೃತಿ

ಕಳೆದ ಜುಲೈ ಪ್ರವಾಹದಲ್ಲಿ ಕೊಚ್ಚಿ ಹೋದ ಪಾರ್ಸೆಟ್ ಅಣೆಕಟ್ಟು ಒಡೆದ ಬಗ್ಗೆ ಅಧಿಕಾರಿಗಳ ಅದಕ್ಷತೆಗಾಗಿ ಸ್ಮಾರಕ ಹುಟ್ಟಿದೆ ಪ್ರವಾಹದಲ್ಲಿ ತೀವ್ರ ಹಾನಿಗೊಳಗಾದ ನೂರು ವರ್ಷಗಳ ಹಿಂದಿನ ಮನೆಯನ್ನು ಅದರ ಕಿರಿಯ ಮಾಲೀಕ ಪುನಃ ಕಟ್ಟಿ, ಅದರ ಮುಂಭಾಗದಲ್ಲಿ ' ಪಾರ್ಸೆಟ್ ಸ್ಮೃತಿ ' — ಪಾರ್ಸೆಟ್ ಸ್ಮರಣಾರ್ಥ - 12-7-61 ಎಂದು ಬರೆದಿರುವನು

ಭಾರತಕ್ಕೆ ಕಲ್ಲಿದ್ದಲು

ಭಾರತಕ್ಕೆ ಪ್ರತಿ ತಿಂಗಳು 10ಸಾವಿರ ಟನ್ ಕಲ್ಲಿದ್ದಲನ್ನು ಪಾಕಿಸ್ತಾನ ಕೊಡುವದೆಂದು ಕ್ವೆಟ್ಟದಲ್ಲಿ ಪಾಕಿಸ್ತಾನಮಂತ್ರಿ ಭುಟ್ಟೋ ತಿಳಿಸಿದ್ದಾರೆ.

ಪಾಕಿಸ್ತಾನ ಆಶೆ ಬಿಟ್ಟಂತೆಯೆ

ಕಾಶ್ಮೀರದ ಬಗ್ಗೆ ಭಾರತದ ವಿರುದ್ಧ ನಿಲುವನ್ನು ಹೊಂದುವಂತೆ ಕೆನೆಡಿಯವರ ಅಡಳಿತವನ್ನು ಒಲಿಸಿಕೊಳ್ಳುವ ಆಶೆಯನ್ನು ಹೆಚ್ಚಬಿಟ್ಟಂತೆಯೇ ಎಂದು ನ್ಯೂಯಾರ್ಕಿನಿಂದ ಬಂದ ವಾರ್ತೆಯೊಂದು ತಿಳಿಸುತ್ತದೆ

× ಸೈಪ್ರೆಸಿನಲ್ಲಿ ಮಸೀದಿಗಳ ಮೇಲೆ ಬಾಂಬೆಸೆದದಕ್ಕೆ, ಟರ್ಕಿ ವಿದ್ಯಾರ್ಥಿಗಳು ಚರ್ಚುಗಳ ಮೇಲೆ ಪುಷ್ಪಗುಚ್ಛವಿಟ್ಟರೆಂದು ಬಂದಾಗ್ಗೆ ಇಸ್ತಾಂಬುಲ್ ವಾರ್ತೆ.

ಕಲ್ಲಿದ್ದಲಿಗೆ ಕಷ್ಟ

ಸದ ದೆಹಲಿಯಲ್ಲಿರುವ ವಿಜ್ಞಾನ ಭವನದಲ್ಲಿ ನಿನ್ನೆ ಕೈಗಾರಿಕಾ ಕೇಂದ್ರ ಸಲಹಾ ಸಮಿತಿಯ ಕಾರ್ಯಕಲಾಪಗಳನ್ನು ಕೇಂದ್ರ ಕೈಗಾರಿಕಾ ಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರು ಉದ್ಘಾಡನೆ ಮಾಡುತ್ತಾ, ಕಲ್ಲಿದ್ದಲು, ವಿದ್ಯುತ್ ಹಾಗೂ ಸಂಚಾರ ಸಂಬಂಧಪಟ್ಟಂತೆ ತುಂಬಾ ಕಡಿತ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಇದನ್ನು ಹೋಗಲಾಡಿಸಲ ಸರ್ಕಾರ ಸೂಕ್ತ ಕಾರ್ಯಕ್ರಮ ಕೈಗೊಳ್ಳುತ್ತಿದೆ ಎಂದರು.

ರಸ್ಕರ ಎಚ್ಚರಿಕೆ

ಜಿನೀವಾದಲ್ಲಿ ನಿನ್ನೆ ನಿಶ್ಶಸ್ತ್ರೀಕರಣ ಸಮ್ಮೇಳನದ ಪ್ರತಿನಿಧಿಗಳನ್ನು ಕುರಿತು ಅಮೆರಿಕ ಸಂಸ್ಥಾನ ಶಾಖೆ ಕಾರ್ಯದರ್ಶಿ ಡೀನ್ ರಸ್ಕ್ ಮಾತನಾಡುತ್ತಾ, ಈ ಚಳಿಗಾಲದಲ್ಲಿ ಸಶಸ್ತ್ರ ಜೂಜು ನಿಲ್ಲಿಸದಿದ್ದರೆ, 1966 ರ ವೇಳೆಗೆ ಈ ಜೂಜು ಎರಡರಷ್ಟು ಆಗುವದು ಎಂದರು ರಷ್ಯ ಪ್ರತಿನಿಧಿ ಗ್ರಾಮಿಕೊರವರು ಮಾತನಾಡಿ, ಅಮೆರಿಕ ಅಣು ಪರೀಕ್ಷೆ ಆರಂಭಿಸಿದರೆ ರಷ್ಯ ಕೂಡ ಅಣು ಪ್ರಯೋಗ ಮಾಡಲು ಬಲಾತ್ಕರಿಸಲ್ಪಟ್ಟಂತೆ ಆಗುವದು ಎಂದರು

★

" ಸ್ಟ್ಯಾಂಡ್ ಸ್ಟಿಲ್ " ಅಂದಾಜ ಪಟ್ಟಿಯ ಮೇಲೆ ದೆಹಲಿಯಲ್ಲಿ ಸೇರಿರುವ ರಾಜ್ಯಸಭೆಯಲ್ಲಿ ನಿನ್ನೆ ಸದಸ್ಯರು ಮಾತನಾಡಿ, ಆಹಾರ ಹಾಗೂ ಪತ್ರಿಕರ ಅಗತ್ಯ ಪದಾರ್ಥಗಳ ಬೆಲೆಯ ಭದ್ರತೆಯ ಬಗೆ ಭರವಸೆ ಕೊಡಬೇಕೆಂದು ಮತ್ತು ರಫ್ತು ಮಾಡುವ ಪದಾರ್ಥಗಳಿಗೆ ಸಂಯಾದ ಬೆಲೆ ರಚನೆ ಆಗಬೇಕೆಂದು ತಿಳಿಸಿದರು.

ನಾಗಾ ದಂಗೆಕೋರ ಫೀಜೋ ಭಾರತಕ್ಕೆ ಬರುವ ಅವಕಾಶವಿಲ್ಲ, ಬಂದರೂ ವಾರೆಂಟು ಇದೆ ಎಂದು ಪಂ|| ನೆಹರು ನಿನ್ನೆ ಲೋಕಸಭೆಯಲ್ಲಿ ತಿಳಿಸಿದರು.

ಮುಖ್ಯಸ್ಥರ ಕೊಲೆ

ಸುರೇಂದ್ರನಗರಕ್ಕೆ ಸುಮಾರು 4 ಮೈಲಿಗಳ ದೂರದಲ್ಲಿರುವ ಸುಪ್ರಸಿದ್ಧ ರುಧೆರೆಜ್ ದೇವಾಲಯದ ಮುಖ್ಯಸ್ಥರಾದ ಶ್ರೀ ಗೋಮಾಂತದಾಸಜೀಯವರನ್ನು ಮೊನ್ನೆ ರಾತ್ರಿ ಮಲಗಿದ್ದಾಗ ಯಾರೋ ಇರಿದು ಕೊಂದಿರುವರು. ಅವರ ರಕ್ಷಕನನ್ನು ಕಟ್ಟಿಹಾಕಿ ಈ ಕೆಲಸ ಮಾಡಿರುವರು ಭಾವನಗರದಲ್ಲಿ ನಿನ್ನೆ ಸೇರಿದ್ದ ಸಾಧು ಸಮ್ಮೇಳನದಲ್ಲಿ ಅವರು ಭಾಗವಹಿಸಬೇಕಾಗಿತ್ತು.

ಮೌನವಿದ್ದ ಸದಸ್ಯರು

ಈ ತಿಂಗಳು ರದ್ದಾಗುವ ಎರಡನೆಯ ಲೋಕಸಭೆಯಲ್ಲಿ 507 ಸದಸ್ಯರುಗಳದ್ದರು ಆ ಪೈಕಿ 104 ಮಂದಿ ಸದಸ್ಯರು ಈ 5 ವರ್ಷಗಳಲ್ಲಿ ಒಂದುಬಾರಿ ಕೂಡ ಮಾತನಾಡಲಿಲ್ಲ ಹೆಚ್ಚಾಗಿ ಮಾತಾಡಿದವರು ಕಾಂಗ್ರೆಸಿನ ಶ್ರೀ ಠಾಕೂರ್ ದಾಸ ಭಾರ್ಗವ ಅವರು 223 ಸಂದರ್ಭಗಳಲ್ಲಿ ಮಾತನಾಡಿರುವರು ಕಾಲ 58 ಗಂಟೆ 45 ನಿಮಿಷಗಳು ಎರಡನೆಯವರೆಂದರೆ ಪಂ|| ನೆಹರು. ನೂರು ಸಂದರ್ಭಗಳಲ್ಲಿ 56 ಗಂಟೆ-26 ನಿಮಿಷಗಳು ಮಾತನಾಡಿರುವರು

★

ಬೆಂಗಳೂರಿನಲ್ಲಿ ಸಮಾವೇಶವಾಗಿರುವ ವಿಧಾನಸಭೆಯಲ್ಲಿ ನಿನ್ನೆ ಶ್ರೀ ಸಿ ಜೆ ಮುಕ್ಕಣ್ಣಪ್ಪನವರು ಮಾತನಾಡುತ್ತಾ, ಮಾಜಿ ಮುಖ್ಯಮಂತ್ರಿಯವರ ನಿವಾಸದ ಮುಂದೆ ಬಿಡಿಜತ್ತಿ, ಮುಖ್ಯ ಮಂತ್ರಿ ಎಂಬ ಬೋರ್ಡು ಇದೆ ಎಂದರು ಪ್ರಕಟಣೆ ಮತ್ತು ಹೊಸ ಮಂತ್ರಿಗಳ ಕಾರ್ಯಕಲಾಪ ಸದಸ್ಯರಿಗೆ ತಿಳಿದಿದೆ ಎಂದು ಸ್ಪೀಕರು ತಿಳಿಸಿದರು.

ಪಾಕಿಸ್ತಾನದ ರಾಷ್ಟ್ರೀಯ ಪರಿಷತ್ತಿಗೆ ಅಧ್ಯಕ್ಷ ಅಜಾಂಬ ಖಾನರ ಸಹೋದರ ಸದಾರ್ ಬಹದ್ದೂರ್ ಖಾನ್ ವಿರೋಧ ಪಕ್ಷದ ನಾಯಕರಾಗುವದಾಗಿ ಕರಾಚಿ ವಾರ್ತೆ ತಿಳಿಸುತ್ತದೆ.

ಚೀಣಕ್ಕೆ ರಷ್ಯದ ಸಹಾಯ ಬರಿದ್

ಕಮ್ಯೂನಿಸ್ಟು ಚೀಣಾಕ್ಕೆ ಸರ್ವ ವಿಧದ ಸಹಾಯವನ್ನು ರಷ್ಯ ನಿಲ್ಲಿಸಿರುವದಾಗಿ ಅಮೆರಿಕದ ಅಧಿಕಾರಿಗಳು ನಿನ್ನೆ ವಾಷಿಂಗ್ಟನ್ನಿನಲ್ಲಿ ತಿಳಿಸಿದರು. ರಷ್ಯ-ಚೀಣಾ ಬಿಕ್ಕಟ್ಟು ಇದಕ್ಕೆ ಕಾರಣವಿರಬಹುದೆಂದು ಅವರು ಹೇಳಿರುವರು ಈಗ ಮುಖ್ಯವಾಗಿ ರಷ್ಯ ಸಹಾಯ ಮಾಡುತ್ತಿರುವದೆಂದರೆ ಕಮ್ಯೂನಿಸ್ಟು ರಾಷ್ಟ್ರಗಳಲ್ಲದ ಭಾರತ ಮತ್ತು ಇಂಡೋನೇಷಿಯಾಗಳಿಗೆ. ಚೀಣಾದಲ್ಲಿ ಆಹಾರ ಉತ್ಪಾದನೆ ಕಡಿಮೆ ಆಗಿದೆ.

ಪತಿ ರಕ್ಷಣೆಗೆ ಪತ್ನಿ ಹೊಣೆ

ಈ ವರ್ಷ ಜನವರಿ ಕಡೆಯ ವರಿಗೆ ಕೇರಳ ಸರ್ಕಾರ ರೂ 269814 ವೃದ್ಧರಿಗೆ ವಿರಾಮ ವೇತನವನ್ನಾಗಿ ಹಂಚಿದ ಎಂದು ಕೇರಳದ ಉಪ ಮುಖ್ಯ ಮಂತ್ರಿ ಶ್ರೀ ಆರ್. ಶಂಕರ್ ನಿನ್ನೆ ಕೇರಳ ವಿಧಾನ ಸಭೆಯಲ್ಲಿ ತಿಳಿಸಿದರು 70 ವಯಸ್ಸು ಮೀರಿದವರಿಗೆ 50 ವರ್ಷಕ್ಕೆ ಕಡಿಮೆ ವಯಸ್ಸಿನ ಪತ್ನಿ ಇದ್ದರೆ ಅಂಥವರಿಗೆ ವೃದ್ಧರ ವಿರಾಮ ವೇತನ ದೊರಕುವದಿಲ್ಲ ಎಂದು ನುಡಿದರು. ಆಕೆ ದುಡಿಯುತ ಗಂಡನನ್ನು ನೋಡಿಕೊಳ್ಳಬಲ್ಲಳೆಂಬುದಾಗಿ ಅವರು ನುಡಿದರು.

× ಆಲ್ಬರ್ಟ್ ಯಾರ್ಸಿನಲ್ಲಿ ಮೊನ್ನೆ ಪ್ರದರ್ಶನ ಕಾರ್ಯ ವೇಳೆ ಗೋಳೀಬಾರು ಮಾಡಿದಾಗ 50 ಮಂದಿ ಯೂರೋಪಿಯನ್ನರು ಸತ್ತ ಸಂದರ್ಭದಲ್ಲಿ ನಿನ್ನೆ ಸಂತಾಪಾರ್ಥ ಮುಷ್ಕರ ನಡೆಯಿತು. ವಾಹನ ಸಂಚಾರ ಮತ್ತು ವ್ಯಾಪಾರ ನಿಂತಿದ್ದವು.

× ರಾಬರ್ಟ್ ಪರ್ಸ್ ಪೆಟೆಯಿಂದ ಬಂದ ವಾರ್ತೆ ಪ್ರಕಾರ 900 ಅಡಿಗಳ ಕಳಗೆ ಬಂಡೆ ಸಿಡಿದು ಶನಿವಾರ ನಾಲ್ಕು ಮಂದಿ ಸತ್ತರು.

ನಾಳೆಯ ಸಂಚಾರಂಗ

ಆಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞಶಿಖಾಮಣಿ
ಸಂಪತ್ಕುಮಾರ ಜೋಯಿಸರಿಂದ
29 ಅಷ್ಟಮಿ ಪೂರ್ವಾಷಾಢ

ಪ್ರಮುಖ ವೃತ್ತಾಂತಗಳು

★

ಪಾಕಿಸ್ಥಾನವು ಭಾಂತ ಗಗನವನ್ನು ಅತಿಕ್ರಮಿಸಿರುವ ವಿಷಯ ವಿಶ್ವಸಂಸ್ಥೆ ವೀಕ್ಷಕರಿಗೆ ತಿಳಿಸಲಾಯಿತೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

oooo

ನವದೆಹಲಿ 26— ಪಾಕಿಸ್ಥಾನದ ದಾಂಧಲೆ ತಪ್ಪಿಸಲು ಗಡಿಯಲ್ಲಿ ಪೋಲೀಸು ಪಡೆ ಇಡಬೇಕೆಂದು ಅಸ್ಸಾಂ ಸರ್ಕಾರದ ಸಲಹೆ.

oooo

ಭಾಂತಕ್ಕೆ ಅಮೇರಿಕಾದಿಂದ ದೊರೆಯುವ 256.8 ಕೋಟಿ ರೂಗಳ ಭಾರಿ ಸಾಲಕ್ಕೆ ಮೊನ್ನೆ ರುಜುಮಾಡಲಾಯಿತೆಂದು ನವದೆಹಲಿ ವಾರ್ತೆ ತಿಳಿಸುತ್ತದೆ.

oooo

ಸಿಮ್ಲಾದ ವರ್ತಮಾನದಂತೆ ಹಿಮಾಚಲ ಪ್ರದೇಶದ ಟೆರಿಟೋರಿಯಲ್ ಕೌನ್ಸಿಲ್ಲಿನ 40 ಸ್ಥಾನಗಳಿಗೆ 201 ಮಂದಿ ಸ್ಪರ್ಧಿಸಿರುವರು.

oooo

ಭಾಂತವು ಚೀಣಾಕ್ಕೆ ಯಾವ ಭಾಗವನ್ನೂ ಬಿಟ್ಟುಕೊಡುವುದಿಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

oooo

ಲೋಕಸಭೆಯಲ್ಲಿ ಪ್ರಶ್ನೆಗಳನ್ನು ಹಾಕಿದ್ದ ಸದಸ್ಯರನ್ನು ಕೂಗಿದಾಗ ಅವರಿಲ್ಲದಿದ್ದುದಕ್ಕಾಗಿ ಸ್ಪೀಕರರು 'ಸದಸ್ಯರು ಸಭೆಗೆ ಗೌರವ ಸಲ್ಲಿಸಬೇಕು, ಇದನ್ನು ಅಲ್ಪ ಪಂಚಾಯತಿಗೆ ಇಳಿಸಬಾರದು' ಎಂದರು.

oooo

ಕಡಮೆ ಸಂಬಳದ ಕೇಂದ್ರ ಸಂಕಾರಿ ನೌಕರರಿಗೆ ಹೆಚ್ಚು ತುಟ್ಟೀಭತ್ಯ ಕೊಡವ ವಿಷಯವನ್ನು ಕೇಂದ್ರ ಸರ್ಕಾರ ಪರ್ಯಾಲೋಚಿಸುತ್ತಿದೆ ಎಂದು ದೆಹಲಿ ವಾರ್ತೆ ತಿಳಿಸುತ್ತಿದೆ.

ಪುರಂದರ ದಾಸರು ಕಂಡ ಲೋಕದ ರೀತಿನೀತಿಗಳು

ಹರಿಯನ್ನು ಮರೆತಿರುವಿರೇಕೆ ?

ಹರಿಯ ಸ್ಮರಣೆಯು ಪರಲೋಕಪ್ರಾಪ್ತಿಯ ಸಾಧನವೆಂದಾದ ಮೇಲೆ ಮೌನವನ್ನು ಹಿಡಿದು ಹರಿಯನ್ನು ಮರೆತಿರುವ ಜನರಿಗೆ ಏನಾಯಿತೆಂದು ಹೇಳಬೇಕು ? ನೆಗ್ಗಿನ ಮುಚ್ಚಿ ಅವರ ನಾಲಿಗೆಯು ಮುರಿದಿರಬೇಕು, ಜಾಲಕತನದಲ್ಲಿ ಅವರಿಗೆ ಭೂತ ಹಿಡಿದಿರಬೇಕು, ಅಥವಾ ಅವರ ಎರಡು ತುಟಿಗಳೂ ಒಂದಾಗಿರಬೇಕು ; ಇಲ್ಲವೇ ಕಾಲಮೃತ್ಯುವು ಬಂದು ಅವರನ್ನು ಕಂಗೆಡಿಸಿಸಬೇಕು : ಅವರು ಮೌನದಿಂದಿರಲು ಬೇರೆ ಕಾರಣಗಳು ಇರಲೂಬಹುದು ; ಉದಾಹರಣೆಗಾಗಿ ಅವರಿಗೆ ಘಟಸರ್ಪ ಕಚ್ಚಿ ವಿಷವು ಏರಿರಲೂಬಹುದು, ನಾಲಿಗೆಯು ಕಡಿದುಹೋಗಿರಲೂಬಹುದು, ಅಥವಾ ಹಠದಿಂದ ಹರಿಯನ್ನು ನೆನೆಯದೇ ಇರುವಂಥ ಕುಟಿಲ ಸ್ವಭಾವದ ಚಂಚಲ ಮನಸ್ಸು ಅವರನ್ನು ಬಾಧಿಸುತ್ತಿರಬಹುದು : ಹರಿ ಎಂದರೆ ತಲೆ ಕಡಿದುಹೋಗುತ್ತಯೆ ಅಥವಾ ಹರಿನಾಮವನ್ನು ನೆನೆಸುವ ಭಾಗ್ಯವು ಅವರ ಹಣೆಯಲ್ಲಿ ಬರೆಯಲಿಲ್ಲವೆ ? ದೇವರನ್ನು ಸ್ಮರಿಸಿದರೆ ಆ ಸ್ಮರಣೆಯು ಸಿಡಿಲೆರಗಿ ಕೊಲ್ಲುವುದೇ ?

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯದ್ರವ್ಯ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

ವುಡ್‌ಲ್ಯಾಂಡ್ಸ್ ವೈಭವ 7 ನೇ ವಾರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಾಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲನ್

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಅಪೆರಾ— 23–3–62 ರಿಂದ

ಶಾರದ (ತಮಿಳು) ಹೊಸ ಚಿತ್ರ

ಪಾತ್ರ— ಎಸ್ ವಿ ರಂಗರಾವ್, ಎಂ ಆರ್ ರಾಧ, ಎಸ್ ಎಸ್ ರಾಜೇಂದ್ರನ್ ಸಾರಂಗಪಾಣಿ, ಎಂ ವಿ ರಾಜಮ್ಮ ಸಂಧ್ಯ, ಮುತ್ತುಲಕ್ಷ್ಮಿ

ರಾಜಧಾನಿಯಲ್ಲಿ ಪ್ರಪ್ರಥಮ ಪ್ರದರ್ಶನ [ದಿನವಹಿ 3 ಅಟಗಳು]

Help The 'Gorakshana'

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

SHAKTI SUDHA

A Superb Tonic



ಝ್ಯುಲೆಜೊ ವೊಂದಸ್ಕ್ (ಉತ್ತರ ಕಾಕಸಸ್) ನಲ್ಲಿ ಇತ್ತೀಚೆಗೆ ತೆರೆಯಲಾದ 200 ಮಂಚಗಳಿರುವ ಒಂದು ಹೊಸ ಆರೋಗ್ಯವರ್ಧಕಾಲಯ

ಗೋರ್ನಿವೊಜ್ದುಖ್ (ಮಲಯ ಸಮೀರ)

Edited, Printed & Published by the Proprietor, Dharma Prachara Nirata M. S. Krishna Rao at the Satyavadi Press Chamarajapuram, Mysore 4.